ಶ್ರೀ ಪಿ. ಜಿ. ಆರ್. ಸಿಂಧ್ಯ.—ಕರ್ನಾಟಕ ಆಂಟಿ ಬಯೊಟಿಕ್ ಕಾರ್ಖಾನೆಯಲ್ಲಿ ಈ ತಿಂಗಳಲ್ಲೇ ಟ್ರಯಲ್ ಪ್ರೊಡಕ್ಷನ್ ಬರಬೇಕಾಗಿತ್ತು. ಆದರೆ ಒಂದು ತಿಂಗಳಕಾಲ ತಡವಾಗಿದೆ. ಬಹುಶಃ ಅಕ್ಟೋಬರ್ ತಿಂಗಳಲ್ಲಿ ಇದು ಪ್ರಾರಂಭವಾಗಬಹುದು. ಈ ಕಾರ್ಖಾನೆ ಆದಷ್ಟುಬೇಗ ಅಸ್ತಿತ್ವಕ್ಕೆ ಬಂದು ಔಷಧಿಗಳ ತಯಾರಿಕಾ ಕಾರ್ಯ ಅತಿ ಶೀಘ್ರವಾಗಿ ಆಗುವಂತೆ ಸರ್ಕಾರದ ಪರವಿಯಿಂದ ನಾನೇನು ಪ್ರಯತ್ನಗಳನ್ನು ಮಾಡಬಹುದೋ ಅವೆಲ್ಲವನ್ನೂ ಮಾಡುತ್ತೇವೆಂದು ಈ ಸದನದ ಸದಸ್ಯರಿಗೆ ತಿಳಿಸ ಬಯಸುತ್ತೇನೆ.

ಶ್ರೀ ಪಿ. ರಾಮದೇವ್.—ಆಸ್ಪತ್ರೆಗಳಲ್ಲಿ ಔಷಧಿಗಳ ಸರಬರಾಜು ಮತ್ತು ವಿತರಣೆ ಸಂದರ್ಭದಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ ಮತ್ತು ಕಾರಣದಿಂದ ಹಿಂದೆ ಕೆಲವು ನೌಕರರನ್ನು ಸಸ್ಪೆಂಡ್ ಮಾಡಿದರು ಅದು ವಿಚಾರಣೆಯಾಗುತ್ತಿದೆ. ಕೆ. ಸಿ. ಜಿ. ಆಸ್ಪತ್ರೆಯಲ್ಲಿ ಡ್ರಗ್ಸ್ ಸ್ಟೋರ್‌ಕೀಪರನ್ನು ಸಸ್ಪೆಂಡ್ ಮಾಡಿದ್ದರು. ಅಂದರೆ ಈಗಿರತಕ್ಕ ಪದ್ಧತಿಯಲ್ಲಿ ಭ್ರಷ್ಟಾಚಾರ ತುಂಬಿತುಳುಕಲು ಅವಕಾಶ ಇರುವುದರಿಂದ ಇದನ್ನು ಸರಿಪಡಿಸುವುದಕ್ಕೆ ಬೇರೆ ವಿಧಾನವನ್ನು ಏನಾದರೂ ಹುಡುಕುತ್ತಿರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಆಸ್ಪತ್ರೆಗಳಲ್ಲಿ ಔಷಧಿಗಳ ಸರಬರಾಜು ಮತ್ತು ವಿತರಣೆ ಸಂದರ್ಭದಲ್ಲಿ ಬಹಳಷ್ಟು ಅವ್ಯವಹಾರಗಳಾಗುತ್ತಿವೆ ಎಂದು ಕೇಳಿಬರುತ್ತಿದೆ. ಆದರೆ ಇದಕ್ಕೆ ಸಂಬಂಧ ಪಟ್ಟಂತೆ ಯಾವುದೇ ನಿರ್ದಿಷ್ಟ ದೂರುಗಳೂ ಸರ್ಕಾರದ ಗಮನಕ್ಕೆ ಬಂದಿಲ್ಲ. ಇದು ವಾಸ್ತವಾಂಶ ಇರಬಹುದು. ಇದನ್ನು ಇಲ್ಲವೆಂದು ಹೇಳುವುದಿಲ್ಲ. ಆದ್ದರಿಂದಲೇ ಇದನ್ನು ಸರಿಪಡಿಸುವ ಸಲುವಾಗಿ ಗೌರ್ನಮೆಂಟ್ ಮೆಡಿಕಲ್ ಸ್ಟೋರ್ಸ್‌ನಿಂದ ಹಿಡಿದು ರೋಗಿಗಳಿಗೆ ಔಷಧಿಗಳ ವಿತರಣಾ ಹಂತದವರೆಗೂ ಪ್ರತಿಯೊಂದುಹಂತ ದಲ್ಲಿಯೂ ಕಂಪ್ಯೂಟರ್ ಪದ್ಧತಿಯನ್ನು ಆಯಂಕರಿಸಬೇಕೆಂದು ಈಗಾಗಲೇ ನಾನು ಹೇಳಿದ್ದೇನೆ. ಮತ್ತು ಸಾಧ್ಯವಾದರೆ ಸರ್ಕಾರೀ ಮೆಡಿಕಲ್ ಸ್ಟೋರ್ಸ್‌ನ್ನು ಳ ಡಿವಿಜನ್‌ನಲ್ಲೂ ಪ್ರಾರಂಭ ಮಾಡಬೇಕೆಂದು ನಾವು ತೀರ್ಮಾನ ತೆಗೆದುಕೊಂಡಿರುವುದಾಗಿ ನಾನು ಆಪತ್ತೇ ಹೇಳಿದ್ದೇನೆ ಈ ಬಗ್ಗೆ ಮಾನ್ಯ ಸದಸ್ಯರು ಸೂಕ್ತ ಸಲಹೆಗಳನ್ನು ಕೊಟ್ಟರೆ ಅದನ್ನು ನಾವು ಕಾರ್ಯಾಚರಣೆಗೆ ತರಲು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆಂದು ಹೇಳಬಯಸುತ್ತೇನೆ.

೧೯೮೦-೮೧, ೧೯೮೧-೮೨ ಹಾಗೂ ೧೯೮೨-೮೩ನೇ ಸಾಲುಗಳಲ್ಲಿ ರಾಜ್ಯದಲ್ಲಿ ನೀಡಲಾದ ವೃದ್ಧಾಪ್ಯ ವೇತನಗಳ ಸಂಖ್ಯೆ.

೨೦೨. ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ) — ಮುಖ್ಯಮಂತ್ರಿಗಳು ಈ ವಿಷಯ ಗಳನ್ನು ದಯವಿಟ್ಟು ತಿಳಿಸುವರೆ,-

(ಅ) ರಾಜ್ಯದಲ್ಲಿ ೧೯೮೦-೮೧, ೧೯೮೧-೮೨ ಹಾಗೂ ೧೯೮೨-೮೩ ರಲ್ಲಿ ಎಷ್ಟು ಮಂದಿಗೆ ವೃದ್ಧಾಪ್ಯವೇತನ ಕೊಡಲಾಗಿದೆ ಮತ್ತು ಹಾಗೆ ಕೊಡಲಾದ ವೃದ್ಧಾಪ್ಯವೇತನದ ಒಟ್ಟು ಮೊತ್ತ ಎಷ್ಟು. (ಜಿಲ್ಲಾವಾರು ಮಾಹಿತಿ ಒದಗಿಸಬೇಕಾಗಿ ವಿನಂತಿ)

(ಆ) ಹಾಗಿದ್ದಲ್ಲಿ, ಸರಕಾರದವರು ವೃದ್ಧಾಪ್ಯವೇತನ ಬದಲು ಗಂಜಿ ಕೇಂದ್ರ ಮೂಲಕ ಬದಲಿ ವ್ಯವಸ್ಥೆ ಮಾಡುವರೇ ?

ಮಾನ್ಯ ಸದಸ್ಯರು ಹಾಜರಿಲ್ಲ

ವೃದ್ಧಾಪ್ಯವೇತನ ವಿತರಣೆ ಹಾಗೂ ಅದು ದುರಪಯೋಗವಾದಂತೆ ತಡೆಗಟ್ಟಲು ಕೈಗೊಂಡ ಕ್ರಮ

೨೦೩. ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ)—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿ ಗಳು ದಯವಿಟ್ಟು ಉತ್ತರಿಸುವರೆ ?

ಅ) ಅಂಚೆಯ ಮೂಲಕ ಬಟವಾಡೆ ಮಾಡುತ್ತಿರುವ ವೃದ್ಧಾಪ್ಯ ವೇತನ ಮತ್ತು ಕುಂಗವಿಕಲರ ಮಾಸಾಸನವನ್ನು ನಕಲಿ ಜನರು ಪಡೆಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?